## ‘ಅವರು ಗೆಳೆಯರಲ್ಲ...’

‘ಆಸ್ಟ್ರೇಲಿಯಾ ಆಟಗಾರರು ನನ್ನ ಗೆಳೆಯರಾಗಿ ಉಳಿದಿಲ್ಲ. ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳ ನಡುವಣ ಸ್ನೇಹಕ್ಕೆ ಧಕ್ಕೆಯಾಗಿದೆ!’ – ಧರ್ಮಶಾಲಾ ಪಂದ್ಯದ ನಂತರ ವಿರಾಟ್ ಕೊಹ್ಲಿ ಅವರು ಹೇಳಿದ ಆಕ್ರೋಶಭರಿತ ನುಡಿಗಳಿವು.

ಸರಣಿ ಆರಂಭಕ್ಕೂ ಮುನ್ನ ಕ್ರೀಡಾಂಗಣದ ಹೊರಗೆ ಇದ್ದ ವಿರಾಟ್ ಮತ್ತು ಆಸ್ಟ್ರೇಲಿಯಾ ಆಟಗಾರರ ನಡುವಣ ಇದ್ದ ಸ್ನೇಹಕ್ಕೆ ಕುಂದು ತರುವಂತಹ ಕೆಲವು ಕಹಿ ಘಟನೆಗಳು ನಡೆದವು.

ಬೆಂಗಳೂರು ಪಂದ್ಯದಲ್ಲಿ ಡಿಆರ್‌ಎಸ್ (ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ) ಅವಕಾಶ ಪಡೆಯುವಲ್ಲಿ ಸ್ಟೀವ್ ಸ್ಮಿತ್ ನಿಯಮಬಾಹಿರ ಕ್ರಮ ಅನುಸರಿಸಿದ್ದರು ಎಂದು ಕೊಹ್ಲಿ ಆರೋಪಿಸಿದ್ದು ದೊಡ್ಡ ವಿವಾದವಾಗಿತ್ತು. ನಂತರ ಬಿಸಿಸಿಐ ಮತ್ತು ಕ್ರಿಕೆಟ್ ಆಸ್ಟ್ರೇಲಿಯಾ ನಡುವಣ ರಾಜೀ ಒಪ್ಪಂದದಿಂದ ವಿವಾದ ಅಂತ್ಯ ಕಂಡಿತ್ತು. ಆದರೆ, ಬೂದಿ ಮುಚ್ಚಿದ ಕೆಂಡದಂತಿದ್ದ ಅಸಮಾಧಾನಗಳು ಹಲವು ಬಗೆಯಲ್ಲಿ ಪ್ರಕಟವಾದವು. ಹೀಯಾಳಿಕೆ, ಟೀಕೆ, ಆಸ್ಟ್ರೇಲಿಯಾ ಮಾಧ್ಯಮಗಳು ಕೊಹ್ಲಿ ಅವರನ್ನೇ ಕೇಂದ್ರವಾಗಿರಿಸಿ ನಡೆಸಿದ್ದ ಟೀಕಾಪ್ರಹಾರಗಳು ತಾರಕಕ್ಕೇರಿದವು.

ಯಾವುದೇ ತಂಡದ ಎದುರು ಆಟವಾಡುವಾಗಲೂ ಕಿಡಿನುಡಿಗಳನ್ನು (ಸ್ಲೆಡ್ಜಿಂಗ್) ಪ್ರಯೋಗಿಸುವ ಜಾಯಮಾನದ ಆಸ್ಟ್ರೇಲಿಯಾ ತಂಡಕ್ಕೆ ಈ ಬಾರಿ ಮಣ್ಣುಮುಕ್ಕಿಸುವ ಇರಾದೆಯಿಂದಲೇ ಕೊಹ್ಲಿ ಇಂತಹ ತಂತ್ರ ಹೆಣೆದಿದ್ದು ಸ್ಪಷ್ಟ. ಆದರೆ ಸರಣಿಯ ಕೊನೆಯಲ್ಲಿ ಆಸ್ಟ್ರೇಲಿಯಾ ನಾಯಕ ಸ್ಟೀವನ್ ಸ್ಮಿತ್ ಕ್ಷಮೆ ಕೇಳಿದರೆ, ಕೊಹ್ಲಿ ಮಾತ್ರ ಕರಗಲಿಲ್ಲ.



ಅಶ್ವಿನ್ ಮತ್ತು ಜಡೇಜ

### ಟೆಸ್ಟ್ ಕ್ರಿಕೆಟ್ ಋತುವಿನ ಪ್ರಮುಖ ಸಾಧನೆಗಳು

| ಆಟಗಾರ | ರನ್ | ವಿಕೆಟ್ |
|---|---|---|
| ರವೀಂದ್ರ ಜಡೇಜ | 556 | 71 |
| ಆರ್. ಅಶ್ವಿನ್ | 464 | 82 |
| ವಿರಾಟ್ ಕೊಹ್ಲಿ | 1252 | — |
| ಚೇತೇಶ್ವರ್ ಪೂಜಾರ | 1316 | — |
| ಕೆ.ಎಲ್. ರಾಹುಲ್ | 708 | — |
| ವೃದ್ಧಿಮಾನ್ ಸಹಾ | 441 | — |
| ಉಮೇಶ್ ಯಾದವ್ | — | 30 |
| ಮೊಹಮ್ಮದ್ ಶಮಿ | — | 18 |

### ಪದಾರ್ಪಣೆಯಲ್ಲಿ ಮಿಂಚಿದವರು

| ಆಟಗಾರ | ದೇಶ | ರನ್ | ವಿಕೆಟ್ |
|---|---|---|---|
| ಜಯಂತ್ ಯಾದವ್ | ಭಾರತ | 228 | 11 |
| ಕರುಣ್ ನಾಯರ್ | ಭಾರತ | 374 | -- |
| ಕುಲದೀಪ್ ಯಾದವ್ | ಭಾರತ | — | 04 |

### ಭಾರತ ಸರಣಿ ವಿಜಯದ ಹಾದಿ (ಟೆಸ್ಟ್)

| ಎದುರಾಳಿ ತಂಡ | ಪಂದ್ಯಗಳು | ಗೆಲುವು | ಸೋಲು | ಡ್ರಾ |
|---|---|---|---|---|
| ನ್ಯೂಜಿಲೆಂಡ್ | 03 | 03 | 00 | 00 |
| ಇಂಗ್ಲೆಂಡ್ | 05 | 04 | 00 | 01 |
| ಬಾಂಗ್ಲಾ | 01 | 01 | 00 | 00 |
| ಆಸ್ಟ್ರೇಲಿಯಾ | 04 | 02 | 01 | 01 |

### ವಿಕೆಟ್‌ಕೀಪರ್- ಬ್ಯಾಟ್ಸ್‌ಮನ್

ದೋನಿ ನಂತರ ವಿಕೆಟ್ ಕೀಪಿಂಗ್ ಹೊಣೆಯನ್ನು ನಿಭಾಯಿಸಬಲ್ಲ ಸಮರ್ಥರ ಹುಡುಕಾಟದಲ್ಲಿ ವೃದ್ಧಿಮಾನ್ ಸಹಾ ಲಭಿಸಿದ್ದಾರೆ. ಮೂರು ಸರಣಿಗಳಲ್ಲಿ ಅವರದ್ದೂ ಆಲ್‌ರೌಂಡ್ ಆಟ. ವಿಕೆಟ್ ಹಿಂದೆ ಮಿಂಚಿನಂತೆ ಡೈವ್ ಮಾಡಿ ಚೆಂಡು ಹಿಡಿಯುವ ಸಹಾ ಬ್ಯಾಟಿಂಗ್‌ನಲ್ಲಿಯೂ ಉತ್ತಮ ಕಾಣಿಕೆ ನೀಡಿದ್ದಾರೆ. ರಾಂಚಿಯಲ್ಲಿ ಅವರ ಆಕರ್ಷಕ ಶತಕ ಮನಗೆದ್ದಿತ್ತು. ಕೋಲ್ಕತ್ತದಲ್ಲಿ ಕಿವೀಸ್ ಎದುರಿನ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿ ಅರ್ಧಶತಕ ಹೊಡೆದಿದ್ದರು.

ಆದರೆ ಇಂಗ್ಲೆಂಡ್ ಸರಣಿಯ ಸಂದರ್ಭದಲ್ಲಿ ಗಾಯಗೊಂಡಿದ್ದ ಅವರ ಬದಲಿಗೆ ಸ್ಥಾನ ಪಡೆದಿದ್ದ ಗುಜರಾತ್‌ನ ಪಾರ್ಥಿವ್ ಪಟೇಲ್ ಕೂಡ ತಮ್ಮ ಛಾಪು ಮೂಡಿಸಿದ್ದರು. ಎಂಟು ವರ್ಷಗಳ ನಂತರ ತಂಡಕ್ಕೆ ಮರಳಿದ್ದ ಅವರು ಕೀಪಿಂಗ್ ಜೊತೆಗೆ ಆರಂಭಿಕ ಬ್ಯಾಟ್ಸ್‌ಮನ್ ಆಗಿ ಮಿಂಚಿದ್ದರು.

ಇಂತಹ ಹತ್ತು ಹಲವು ಆಶಾದಾಯಕ ಅಂಶಗಳು ಕಳೆದು ಹೋದ ಋತುವಿನಲ್ಲಿ ಗಮನ ಸೆಳೆದಿವೆ. ಮುಂದಿನ ಋತುವಿನಲ್ಲಿ ಕೊಹ್ಲಿ ಬಳಗವು ಈ ಬಲದ ಮೇಲೆ ವಿದೇಶಿ ನೆಲದಲ್ಲಿಯೂ ಕೀರ್ತಿಪತಾಕೆ ಹಾರಿಸಲಿದೆಯೇ? ಎಂಬುದನ್ನು ಕಾದು ನೋಡಬೇಕು.